ದಿನಾಂಕಃ 14-05-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದು ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ:

ನಾನು ಈ ದಿನ ಮೇಮೋದ ಮೂಲಕ ನನ್ನ ಅರ್ಜಿಗೆ ಪೂರಕವಾಗಿ ಒಂದು ದಾಖಲೆ ಹಾಜರಪಡಿರಸಿರುತ್ತೇನೆ. ಅವುಗಳನ್ನು ಗುರುತಿಸುವಂತೆ ಕೋರುತ್ತಾರೆ.

| | |
|---|---|
| 1. | ಶವಾ ಪರೀಕ್ಷೆ ಹಾಜರಪಡಿಸಿರುತ್ತೇನೆ. ಅದನ್ನು ನಿಪಿ-30 ಎಂದು ಗುರುತಿಸಲಾಯಿತು. |

ಆದ್ದರಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಪರಿಹಾರವನ್ನು ಮಂಜೂರು ಮಾಡುವಂತೆ ಕೊರುತ್ತೇನೆ.

ಪಾಟೀ ಸವಾಲು: **2** ನೇ ಎದುರುದಾರ ಪರ ಶ್ರೀ ಎಂಎಂಕೆ ವಕೀಲರಿಂದ:

ಮೃತ ಶಾಂತಾ ತಳವಾರ ನನ್ನ ತಾಯಿ. 2 ರಿಂದ 4 ನೇ ಅರ್ಜಿದಾರರು ನನ್ನ ಸಹೋದರ ಮತ್ತು ಸಹೋದರಿಯರು. ನಾನು ಕೂಲಿ ಕೆಲಸ ಮಾಡಿಕೊಂಡು ವಾಸ ಇರುತ್ತೇನೆ. ನನ್ನ ಮದುವೆ ಆಗಿರುತ್ತದೆ, ಆದರೆ ತವರು ಮನೆಯಲ್ಲಿ ವಾಸ ಇರುತ್ತೇನೆ. 2 ಮತ್ತು 3 ನೇ ಅರ್ಜಿದಾರರ ಮದುವೆಯಾಗಿದ್ದು, ಅವರ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. 4 ನೇ ಅರ್ಜಿದಾರನ ಮದುವೆಯಾಗಿರುವುದಿಲ್ಲ. 4 ನೇ ಅರ್ಜಿದಾರ ಕೂಲಿ ಕೆಲಸ ಮಾಡುತ್ತಾರೆ. ಮೊದಲು ನನ್ನ ತಾಯಿ ನಮ್ಮ ಕುಟುಂಬದ ನಿರ್ವಹಣೆ ಮಾಡುತ್ತಿದ್ದಳು, ಆದರೆ ಈಗ ನಮ್ಮ ನಮ್ಮ ಕುಟುಂಬವನ್ನು ನಾವೇ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದೇವೆ. ನಮ್ಮ ಕುಟುಂಬದ ನಿರ್ವಹಣೆಯನ್ನು ಮೊದಲು ನನ್ನ ತಾಯಿ ನೋಡಿಕೊಂಡು ಹೋಗುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬನಹಟ್ಟಿಯ ಸ್ವಾಗತ ದಾಬಾದಲ್ಲಿ ಚಪಾತಿ ಮಾಡುವ ಕೆಲಸ ಮಾಡುತ್ತಿದ್ದಳು. ದಿನಿನಿತ್ಯ ನನ್ನ ತಾಯಿ ರೂ.1000/- ರಿಂದ 1200/- ರವರೆಗೆ ಸಂಪಾದನೆ ಮಾಡುತ್ತಿದ್ದಳು. ನನ್ನ ತಾಯಿ ಸದರಿ ದಾಬಾದಲ್ಲಿ ಕೆಲಸ ಮಾಡುತ್ತಿರುವ ಕುರಿತು ರುಜುವಾತುಪಡಿಸಲು ಅದರ ಮಾಲೀಕರನ್ನು ವಿಚಾರಣೆಗೊಳಪಡಿಸುತ್ತೀರಾ ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಸದರಿ ದಾಬಾದಲ್ಲಿ ಕೆಲಸ ಮಾಡಿ ತಿಂಗಳಿಗೆ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಮೃತಪಟ್ಟಾಗಿ ಅವರ ವಯಸ್ಸು 50 ವರ್ಷ ಇತ್ತು. ಆ ಬಗ್ಗೆ ಆಧಾರ ಕಾರ್ಡ ಹಾಜರಪಡಿಸಿರುತ್ತೇನೆ. ನನ್ನ ತಾಯಿ ಮೃತಪಟ್ಟಾಗಿ ಅವರ ವಯಸ್ಸು 60 ವರ್ಷಕ್ಕಿಂತ ಮೇಲ್ಪಟ್ಟು ಇದ್ದರೂ ಸಹ ಅವರಿಗೆ 50 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿರುವಾಗ ಜಮಖಂಡಿ ರಸ್ತೆಯಲ್ಲಿರುವ ಸ್ವಾಗತ ದಾಬಾದ ಮುಂದೆ ಸ್ಕೂಟಿ ಅಪಘಾತಪಡಿಸಿರುತ್ತದೆ. ಅಪಘಾತಪಡಿಸಿದೆ ಎಂದು ಹೇಳಿದ ಸ್ಕೂಟಿ ನಂಬರ ಮತ್ತು ಅದು ಯಾವ ಬಣ್ಣದಿಂದ ಕೂಡಿತ್ತು ಎಂದು ನನಗೆ ಗೊತ್ತಿಲ್ಲ. ಅಪಘಾತದ ದಿನದಂದು ಸದರಿ ಸ್ಕೂಟಿಯನ್ನು ಶ್ರೀಶೈಲ ಬಸವಣ್ಣನವರ ಚಲಾಯಿಸುತ್ತಿದ್ದರು. ಆ ದಿನ ನಾನೂ ನನ್ನ ತಾಯಿಯೊಂದಿಗೆ ಕೆಲಸಕ್ಕೆ ಹೋಗಿದ್ದು, ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿರುವಾಗ ಅಪಘಾತವಾಗಿರುತ್ತದೆ. ಅಪಘಾತವು ರಾತ್ರಿ 10.30 ರಿಂದ 11.00 ರ ಸಮಯದಲ್ಲಿ ಆಗಿರುತ್ತದೆ. ಆ ದಿನ ನಾನು ಮತ್ತು ನನ್ನ ತಾಯಿ ರಸ್ತೆ ದಾಟಿ ಹೋಗುತ್ತಿದ್ದೆವು ಎಂದರೆ ಸರಿ. ರಾತ್ರಿ 10.30 – 11.00 ಗಂಟೆ ಸುಮಾರಿಗೆ ಸ್ಥಳದಲ್ಲಿ ಕತ್ತಲೆ ಇದ್ದು, ಯಾವುದೇ ಲೈಟಿನ ವ್ಯವಸ್ಥೆ ಇಲ್ಲ ಎಂದರೆ ಸರಿ. ಅಪಘಾತಪಡಿಸಿದ ಸ್ಕೂಟಿಯ ಸವಾರನು ಬನಹಟ್ಟಿಯಿಂದ ಯಲ್ಲಟ್ಟಿ ಕಡೆಗೆ ಹೋಗುತ್ತಿದ್ದನು. ಆ ದಿನ ಸ್ಕೂಟಿಯ ಚಾಲಕ ಬನಹಟ್ಟಿಯಿಂದ ಯಲ್ಲಟ್ಟಿ ಕಡೆಗೆ ರಸ್ತೆಯ ಎಡಗಡೆ ಚಲಾಯಿಸಿಕೊಂಡು ಬರುತ್ತಿದ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೊಬೈಲ್ ನಲ್ಲಿ ಮಾತನಾಡುತ್ತಾ ಸ್ಕೂಟಿಯನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ನಾವು ರಸ್ತೆ ದಾಟುತ್ತಿರುವಾಗ ನನ್ನ ತಾಯಿಗೆ ಅಪಘಾತಪಡಿಸಿರುವುದಾಗಿ ಹೇಳುತ್ತಾರೆ. ದೂರನ್ನು ನಾನೇ ಸಲ್ಲಿಸಿರುತ್ತೇನೆ. ಆ ದಿನ ಸ್ಕೂಟಿಯ ಸವಾರ ಮೊಬೈಲನಲ್ಲಿ ಮಾತನಾಡುತ್ತಾ ಬಂದು ಅಪಘಾತಪಡಿಸಿರುತ್ತಾನೆ ಎಂದು ದೂರಿನಲ್ಲಿ ಹೇಳಿರುವುದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಕತ್ತಲೆ ಇರುವುದರಿಂದ, ನಾನು ಮತ್ತು ನನ್ನ ತಾಯಿ ರಸ್ತೆ ದಾಟುತ್ತಿರುವಾಗ ಸವಾರಿನಿಗೆ ರಸ್ತೆಯ ಎದುರುಗಡೆ ಕಾಣದೇ ನಮ್ಮ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ 2-3 ದಿನಗಳ ನಂತರ ದೂರನ್ನು ಸಲ್ಲಿಸಿರುತ್ತೇನೆ. ಅಪಘಾತದ ಮರುದಿನ ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ, ಆಸ್ಪತ್ರೆಯಲ್ಲಿ ನನ್ನ ತಾಯಿಗೆ ಆರಾಮವಾಗಬಹುದೆಂಬ ಉದ್ದೇಶದಿಂದ ನೀಡಿಲ್ಲ, ಆಸ್ಪತ್ರೆಯಲ್ಲಿ ಹೆಚ್ಚಿನ ಹಣ ಬೇಕಾಗುತ್ತದೆ ಎಂದು ಹೇಳಿದ್ದರಿಂದ ದೂರು ಸಲ್ಲಿಸಲು ತಡವಾಗಿರುತ್ತದೆ. ಅಪಘಾತವು ನಮ್ಮ ತಪ್ಪಿನಿಂದ ಆಗಿರುತ್ತದೆ, ಕಾರಣ

ತಕ್ಷಣ ದೂರು ನೀಡಿಲ್ಲ, ತದನಂತರ ಪರಿಹಾರ ಪಡೆಯುವ ಸಲುವಾಗಿ 5 ದಿನ ತಡವಾಗಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ತಾಯಿಯ ಎರಡೂ ಕೈಗಳು ಮುರಿದಿದ್ದವು, ತಲೆಗೆ ಮತ್ತು ಕಾಲಿಗೆ ಪೆಟ್ಟಾಗಿತ್ತು. ಅಪಘಾತದ ನಂತರ ನನ್ನ ತಾಯಿಯನ್ನು ಜಮಖಂಡಿಯ ಕುಸಬಿ ಆಸ್ಪತ್ರೆಗೆ ಚಿಕಿತ್ಸೆ ಕುರಿತು ಸೇರಿಸಿರುತ್ತೇವೆ. ತದನಂತರ ನನ್ನ ತಾಯಿಗೆ ವಿಜಯಪುರ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಿರುತ್ತೇವೆ. ಅಪಘಾತದ 8 ದಿನಗಳ ನಂತರ ನನ್ನ ತಾಯಿ ಮೃತಪಟ್ಟಿರುತ್ತಾರೆ. ನಿಪಿ-2 ರ ದಾಖಲೆ ಆಸ್ಪತ್ರೆಗೆ ಮುಂಗಡವಾಗಿ ಕಟ್ಟಿದ್ದ ಹಣದ ರಶೀದಿ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ವೈದ್ಯಕೀಯ ದಾಖಲೆಗಳು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಖೊಟ್ಟಿಯಾಗಿ ಸೃಷ್ಟಿಸಿಕೊಂಡು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಾಯಿಯ ತಪ್ಪಿನಿಂದ ಆಗಿರುತ್ತದೆ, ಆದರೂ ಸ್ಕೂಟಿ ಚಾಲಕನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಕಂಡಿಕೆ 6 ರಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಅಪಘಾತವು ನಮ್ಮ ತಪ್ಪಿನಿಂದ ಆಗಿರುವುದರಿಂದ 2 ನೇ ಎದುರುದಾರ ಪರಿಹಾರ ಕೊಡಲು ಯಾವುದೇ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರ ಅರ್ಜಿದಾರರು ನನ್ನ ತಾಯಿಯ ಸಂಪಾದನೆ ಮೇಲೆ ಅವಲಂಬನೆ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA
Digitally signed by ASHAPPA
Date: 2025.05.14 12:26:53 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ